**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 8/2024**

ಪಿ.ಡಬ್ಲುಃ3 ಸಿಡಬ್ಲುಃ8

| | | |
|---|---|---|
| ಸಾಕ್ಷಿಯ ಹೆಸರು | : | ಹುಲೆಪ್ಪ |
| ತಂದೆಯ ಹೆಸರು | : | ಯಂಕಪ್ಪ |
| ವಯಸ್ಸು | : | 43 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಮುರಾರಿ ಪುರ ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 14-11-2024

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಆರೋಪಿ ನನಗೆ ಅಣ್ಣನಾಗಬೇಕು. ಚಾಸಾ-6 ನನ್ನ ಹೆಂಡತಿ. ಮೃತ ಹುಲೆಮ್ಮ ನನಗೆ ಅತ್ತಿಗೆಯಾಗಬೇಕು. ಅವರಿಗೆ 4 ಜನ ಮಕ್ಕಳು . ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳು ಇದ್ದಾರೆ. ಅವರುಗಳು ಚಾಸಾ-7,13, ಆಕಾಶ್ ಮತ್ತು ಪ್ರಕಾಶ್ ಆಗಿರುತ್ತಾರೆ. ಚಾಸಾ-7 ರವರಿಗೆ ಮದುವೆ ಆಗಿಲ್ಲ. ಅವಳು ತನ್ನ ತಂದೆ ತಾಯಿ ಜೊತೆ ವಾಸ ಇದ್ದಳು. ನನ್ನ ಅತ್ತಿಗೆ ಈಗ ಜೀವಂತ ಇಲ್ಲ. ನನ್ನ ಅತ್ತಿಗೆ ತನ್ನ ಮನೆಯಲ್ಲಿ ಈಗ ಸುಮಾರು ಒಂದು ವರ್ಷದ ಹಿಂದೆ ಮರಣ ಹೊಂದಿದ್ದಳು. ನನ್ನ ಅತ್ತಿಗೆ ಹೇಗೆ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತಿಗೆ ಯಾವ ಕಾರಣದಿಂದಾಗಿ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಅರೋಪಿಯು ನನ್ನ ಅತ್ತಿಗೆಯನ್ನು ಕೊಲೆ ಮಾಡಿದ ಸಂಗತಿ ನನಗೆ ಗೊತ್ತಿಲ್ಲ. ಆರೋಪಿ ನನ್ನ ಅತ್ತಿಗೆಯ ನಡತೆ ಬಗ್ಗೆ ಅನುಮಾನಪಟ್ಟು ನನ್ನ ಅತ್ತಿಗೆಗೆ ಹೊಡೆ ಬಡೆ ಮಾಡಿ ಹಿಂಸೆ ಕೊಟ್ಟಿಲ್ಲ. ಈ ಬಗ್ಗೆ ಆರೋಪಿಗೆ ನಮ್ಮ ಅತ್ತಿಗೆಯ ಮನೆಯವರು ಯಾರು ಬುದ್ದಿವಾದ ಹೇಳಿಲ್ಲ ಮತ್ತು ಯಾವುದೇ ಪಂಚಾಯಿತಿ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:

ದಿಃ **28-09-2023** ರಂದು ನಾನು ಈ ಪ್ರಕರಣದಲ್ಲಿ ಪೊಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು --------------- ನನಗೆ ಮಾಹಿತಿ ತಿಳಿದಿರುತ್ತದೆ " ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ನಿಪಿ-3 ರಂತೆ ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಮತ್ತು ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಆರೋಪಿಯೂ ನನ್ನ ಅಣ್ಣನಾಗಿರುವುದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಆರೋಪಿ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.